MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - THURSDAY 27-4-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

**ಕಚ್ಚಾ ಗೋಡಂಬಿ ಆಮದು ಮುಂದೆ ದುಬಾರಿಯಾಗುವ ಸಾಧ್ಯತೆ**

ಭಾರತದ ಗೋಡಂಬಿ ಸಂಸ್ಕರಣಾ ದಾರರು ಬಹುಪಾಲು ಆಮದು ಗೋಡಂಬಿಯನ್ನವಲಂಭಿಸಿದ್ದು, ಹೆಚ್ಚಿನ ಪಾಲು ದಕ್ಷಿಣ ಆಫ್ರಿಕಾದ ದೇಶಗಳಿಂದ ಆಮದು ಮಾಡಲಾಗುತ್ತಿದೆ. ದಕ್ಷಿಣ ಆಫಿಕ್ರಾದಲ್ಲಿ ಗೋಡಂಬಿ ಸಂಸ್ಕರಣೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಕಚ್ಚಾ ಗೋಡಂಬಿಯನ್ನು ಅಲ್ಲಿನ ಸಂಸ್ಕರಣೆಗೆ ಲಭ್ಯವಾಗುವಂತೆ ಪೂರಕ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಕಚ್ಚಾ ಗೋಡಂಬಿ ರಫ್ತಿಗೆ ದುಬಾರಿ ರಫ್ತು ತೆರಿಗೆ ವಿಧಿಸುತ್ತಿದ್ದು, ಸಂಸ್ಕರಿತ ಗೋಡಂಬಿ ತಿರುಳ ರಫ್ತಿಗೆ ತೆರಿಗೆ ವಿನಾಯತಿ ನೀಡುತ್ತಿದ್ದಾರೆನ್ನಲಾಗಿದೆ. ಭಾರತದಲ್ಲಿ ಇಲ್ಲಿನ ಗೋಡಂಬಿ ಬೆಳೆಗಾರರಿಗೆ ಯೋಗ್ಯ ದರ ಲಭ್ಯವಾಗದಿದ್ದಲ್ಲಿ ಉತ್ಪಾದನೆಗೆ ಪ್ರೋತ್ಸಾಹವಿಲ್ಲದೆ ಉತ್ಪಾದನೆ ಇಳಿಕೆಯಾದರೆ ಮುಂದಿನ ದಿನಗಳಲ್ಲಿ ಆಮದು ಕಚ್ಚಾ ಗೋಡಂಬಿ ದುಬಾರಿಯಾಗುವ ಎಲ್ಲಾ ಸಾಧ್ಯತೆಗಳಿವೆ. ಭಾರತದಲ್ಲಿ ಕಚ್ಚಾ ಗೋಡಂಬಿ ಉತ್ಪಾದನೆ ಹೆಚ್ಚಳಕ್ಕೆ ಪೂರಕ ಯೋಜನೆಗಳು ಹಾಗೂ ಬೆಳೆಗಾರರಿಗೆ ಪ್ರೋತ್ಸಾಹ ಲಭಿಸಬೇಕಾಗಿದೆ.

**ಕಡ್ಲೆ ರಫ್ತು ಹೆಚ್ಚಳ**

ಭಾರತದಿಂದ ಕಡ್ಲೆ ರಫ್ತು ಫೆಬ್ರವರಿ ತಿಂಗಳಲ್ಲಿ 10 ಪಟ್ಟು ಹೆಚ್ಚಳಗೊಂಡು 52.495 ಟನ್‌ಗಳಿಗೇರಿದೆಯೆನ್ನಲಾಗಿದೆ. ರಫ್ತು ಬೇಡಿಕೆ ಹೆಚ್ಚಳವಾಗಿದ್ದು ಹೆಚ್ಚಿನ ಪ್ರಮಾಣ ದರ ರಫ್ತಾಗುತ್ತಿದೆ ಹಾಗೂ ಸರಕಾರಿ ಏಜೆನ್ಸಿ NAFED ನಿಂದ ಸರಕಾರಿ ಖರೀದಿ ಪ್ರಗತಿಯಲ್ಲಿದೆ. ಆದರೆ ಕಡ್ಲೆ ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ಕಡ್ಲೆ ದರ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಿದೆಯೆನ್ನಲಾಗಿದೆ. ಉತ್ಪಾದನೆ ಹೆಚ್ಚಳವಿದ್ದರೂ ಹೆಚ್ಚಿನ ರಫ್ತು, ದೇಶೀ ಬೇಡಿಕೆಯಿಂದ ಮುಂದಿನ ದಿನಗಳಲ್ಲಿ ದರ ಹೆಚ್ಚಳವಾಗುವ ಸಾಧ್ಯತೆಗಳಿವೆ.

**ಜೋಳ ದರ ಇಳಿಕೆ**

ಹೊಸ ಬೆಳೆಯ ಕಟಾವಿನ ನಂತರ ಬೆಳೆಯುವ ಪ್ರದೇಶಗಳಿಂದ ಹೊಸ ಬೆಳೆಯ ಜೋಳದ ಆವಕ ಹೆಚ್ಚಳವಾದ್ದಾರಿಂದ ದರ ಇಳಿಕೆಯಾಗಿ ಕೆಲವು ಕಡೆಗಳಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ದರವಿದೆಯೆನ್ನಲಾಗಿದೆ. ರೂ.2500–2600 ದರವಿದ್ದ ಜೋಳಕ್ಕೆ ರೂ.1900–1950 ಲಭಿಸುತ್ತಿದೆಯೆನ್ನಲಾಗಿದೆ. ಜಾಗತಿಕವಾಗಿಯೂ ಪೂರೈಕೆ ಹೆಚ್ಚಳದಿಂದ ದರ ಇಳಿಕೆಯಾಗಿರುವುದರಿಂದ ರಫ್ತು ಬೇಡಿಕೆಯೂ ಇಳಿಕೆಯಾಗಿದೆಯೆನ್ನಲಾಗಿದೆ.

**ವಿಯೆಟ್ನಾಂ, ಕಾಳುಮೆಣಸು ದರ ಸ್ವಲ್ಪ ಹೆಚ್ಚಳ**

ಹಿಂದಿನೆರಡು ಮೂರು ದಿನಗಳಿಂದ ವಿಯೆಟ್ನಾಂ ನಲ್ಲಿ ಕಾಳುಮೆಣಸು ದರ ಸ್ವಲ್ಪ ಮಟ್ಟಿನ ಹೆಚ್ಚಳ ಕಂಡಿದೆಯೆನ್ನಲಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಡೋನೇಶಿಯಾ ಕಾಳುಮೆಣಸು ದರ ಟನ್‌ಗೆ $ 3534 ಇದೆಯೆನ್ನಲಾಗಿದೆ. ದೇಶೀ ದರ ಸ್ಥಿರದಿಂದ ಉತ್ತಮವಿದೆ.